ಪುಸ್ತಕ ಪರಿಚಯ

# ಮೂಕಂ ಕರೋತಿ ವಾಚಾಲಂ




## ಮೂರನೇ ಕಿವಿ

**ಲೇಖಕರು:** ರವೀಂದ್ರ ಭಟ್ಟ ; **ಪ್ರಕಾಶನ:** ಅಂಕುರ ಪ್ರಕಾಶನ, ೧೧೪೮, ೧ನೇ ಮಹಡಿ,
೨ನೇ ಕ್ರಾಸ್, ಪಡುವಣ ರಸ್ತೆ, ಕುವೆಂಪು ನಗರ, ಮೈಸೂರು–೫೭೦ ೦೨೩
**ಪುಟ:** ೧೬ + ೧೬೦. **ಮುದ್ರಣ:** ೨೦೧೨. **ಬೆಲೆ :** ರೂ. ೧೩೦/–
**ದೂರವಾಣಿ:** ೯೪೪೪೮೫ ೨೦೪೧೪; (ಪ್ರ). ೯೪೪೪೮೪ ೭೦೧೭೬ (ಲೇ)

'ಪ್ರಜಾವಾಣಿ'ಯ ಹಿರಿಯ ಪತ್ರಕರ್ತ ರವೀಂದ್ರ ಭಟ್ಟರ ಜನಪ್ರಿಯ ಐದನೇ ಕೃತಿಯಾದ 'ಮೂರನೇ ಕಿವಿ' ಈಗ ಪರಿಷ್ಕೃತ ದ್ವಿತೀಯ ಮುದ್ರಣವನ್ನು ಕಂಡಿದೆ. ಒಳಗಿವಿಯ ಸುರುಳಿನಾಳ (ಕರ್ಣಶಂಖ; ಇಂಗ್ಲಿಷ್‌ನಲ್ಲಿ, 'ಕಾಕ್ಲಿಯ') ದೋಷದಿಂದಾಗಿ ಹುಟ್ಟಿನಿಂದಲೇ ವಾಕ್‌ಶ್ರವಣ ಶಕ್ತಿಗಳಿಂದ ವಂಚಿತನಾಗಿ ನಿಶ್ಯಬ್ದನಾಗಿದ್ದ ತಮ್ಮ ಎರಡನೇ ಮಗ ೧೨ ವರ್ಷದ ನಿರಂಜನನನ್ನು, ಮಾಮೂಲಿ ಶಾಲೆಯನ್ನೇ ಸೇರಿ ಅಲ್ಲಿ ಶ್ರೇಷ್ಠ ವಿದ್ಯಾರ್ಥಿಗಳಲ್ಲೊಬ್ಬನಾಗುವ, ವೇದಿಕೆಗಳಿಂದ ಭಾಷಣಮಾಡುವ ಮತ್ತು ನಾಟಕಗಳಲ್ಲಿ ಸಂಭಾಷಿಸುವ, ಹಾಗೂ ಎಳೆಯ ವಯಸ್ಸಿನಲ್ಲೇ ಎಲ್ಲರ ಒಳಿತಿಗಾಗಿ ಚಿಂತಿಸುವ ಮಟ್ಟಕ್ಕೆ, ಹೇಗೆ ತಮ್ಮ ಪತ್ನಿ ದೀಪಾ ಮತ್ತು ತಾವು ಕೂಡಿ, ತಂದುನಿಲ್ಲಿಸಿದರೆಂಬುದನ್ನು ನಿದರ್ಶಿಸುವ ಈ ಗಮನಾರ್ಹ ಕೃತಿಯು, ಓದುಗರ ಒಳಗಿವಿಯನ್ನೂ – ಒಳಗಣ್ಣನ್ನೂ ತೆರೆಸಿ, ಮನುಷ್ಯಪ್ರಯತ್ನದ ಮಹಿಮೆಯ ಬಗ್ಗೆ ಅವರನ್ನು ಮೂಕರನ್ನಾಗಿಸುತ್ತದೆ.

**'ಇದು ಕಟ್ಟು ಕಥೆಯಲ್ಲ!'** ಎಂಬ ಉಪಶೀರ್ಷಿಕೆಯನ್ನು ಅಗತ್ಯಪಡಿಸುವಷ್ಟರ ಮಟ್ಟಿಗೆ ನಂಬಲು ಕಷ್ಟವಾದ ನಿಜಜೀವನ ಕಥಾವಸ್ತುವಿರುವ ಈ ಪುಸ್ತಕದಲ್ಲಿನ ಪ್ರಧಾನ ವೈಶಿಷ್ಟ್ಯವೆಂದರೆ, ನಿರಂಜನನ ತಾಯಿ ದೀಪಾ ಅವರ ತ್ರಿವಿಕ್ರಮಛಲ ಮತ್ತು ಭಗೀರಥಪ್ರಯತ್ನ. ಹುಟ್ಟುಗನ್ನಡದ ಶಬ್ದಾಣುಗಳನ್ನು ಬಿಡಿಬಿಡಿಯಾಗಿಸಿ, ಒಂದೊಂದನ್ನೂ ಹಗಲೂ–ಇರುಳೂ ಒತ್ತಿಒತ್ತಿ ಮಗನಿಗೆ ಹಿಯರಿಂಗ್ ಏಯ್ಡ್ ಮುಖಾಂತರ ಕಿವಿಚಾಟು ಮಾಡಿಸಿ, ಕಡೆಗೆ ಅವನ ಧ್ವನಿಯಲ್ಲೇ ಅದನ್ನು ಶುದ್ಧವಾಗಿ ಹೊರಡಿಸಿ, ಜೊತೆಗೆ, 'ಶಬ್ದ' ಎಂಬಂಥದೊಂದು ಜಗತ್ತಿನಲ್ಲಿದೆ ಎಂಬ ಮೂಲ ಅರಿವನ್ನೂ, ಜೀವನದ ಅತಿ ಸಾಮಾನ್ಯ ಜ್ಞಾನವನ್ನೂ ಅವನಲ್ಲಿ ಅರಳಿಸಿ, ಪ್ರಕೃತಿಮಾತೆಯು ಏನನ್ನು ಸಹಜವಾಗಿ ಕಲಿಸಬೇಕಿತ್ತೋ ಅದೆಲ್ಲವನ್ನೂ ಹೆತ್ತತಾಯಿಯಾದ ತಾನೊಬ್ಬಳೇ ತನ್ನ ಮಗನಿಗೆ ತ್ವರಿತವಾಗಿ ಕಲಿಸಿ, ದೀಪಾ ಅವರು ಮಾಡಿರುವ ಸಾಧನೆ ಮತ್ತು ಅದರ ಹಿಂದಿರುವ ಶ್ರಮ–ಸಾಹಸ–ಕೆಚ್ಚು – ಇವೆಲ್ಲವೂ ಈ ಪುಸ್ತಕದಲ್ಲಿ ಸುಲಲಿತವಾಗಿ, ಸ್ಫೂರ್ತಿಕಾರಕವಾಗಿ ಓದುಗರ ಮನತಟ್ಟುತ್ತವೆ. "ಎನ್ನ ಕಿವುಡನ ಮಾಡಯ್ಯ" ಎಂದು ಸುತ್ತಲ ಸಮಾಜದ ಶಬ್ದಗಳೆಲ್ಲದಕ್ಕೆ ತನ್ನ ಕಿವಿಯನ್ನು ಮುಚ್ಚಿಟ್ಟುಕೊಂಡು, ಅದನ್ನು ತನ್ನ ಮಗನ ಕಿವಿಯನ್ನು ತೆರೆಸಲೆಂದೇ ಮುಡಿಪಾಗಿಸಿ, ತನಗಿದ್ದ ಒಳ್ಳೆಯ ಸಂಗೀತಧ್ವನಿಯನ್ನೂ ಅಡಗಿಸಿಟ್ಟುಕೊಂಡ ದೀಪಾ ಅವರ ಅಸಾಧಾರಣ ತ್ಯಾಗ ಮತ್ತು ತಪಸ್ಸು ಕೂಡ ಇಲ್ಲಿ ಪರಿಣಾಮಕಾರಿಯಾಗಿ ಹೊಮ್ಮಿಬಂದಿವೆ.

" 'ವೇದಗಳನ್ನು ಅಪೌರುಷೇಯ' ಎಂದು ಕರೆಯುತ್ತಾರೆ. ಅದು ಏಕೆ ಎನ್ನುವುದರ ಸ್ಪಷ್ಟ ಕಲ್ಪನೆ 'ಮೂರನೇ ಕಿವಿ' ಓದಿದಾಗ ಆಯಿತು" ಎಂಬ ಓದುಗರೊಬ್ಬರ ಅಭಿಪ್ರಾಯವು ಪುಸ್ತಕದ ಕಡೆಯ ಭಾಗದಲ್ಲಿ ಕಂಡುಬರುತ್ತದೆ. ಅವರು ಹಾಗೆ ಹೇಳಿರುವುದು ಒಂದು ವ್ಯಂಗ್ಯಾರ್ಥದಲ್ಲಿ ಸರಿಯೆನಿಸುತ್ತದೆ. ಏಕೆಂದರೆ, ನಿರಂಜನನ ಸ್ಥಿತಿಯನ್ನು ಸುಧಾರಿಸಲು ನೇರಕಾರಣವಾದ, 'ವುಡ್‌ಫರ್ಡ್ ಕಲಿಕೆ ಕ್ರಮ'ದ ಪ್ರವರ್ತಕರಾದ ಬಿಯಾಟ್ರಿಸ್ ಇಂಗಾಲ್; ಆ ಕ್ರಮವನ್ನು ನಿರಂಜನನ ಪೋಷಕರಿಗೆ ಹೇಳಿಕೊಟ್ಟ ಮೈಸೂರಿನ ವಿಶೇಷ ಶಾಲೆಯ ಮೂಲಪ್ರೇರಕರಾದ ರತ್ನಾ ಶ್ರೀನಿವಾಸನ್; ಅಲ್ಲಿನ ಮುಖ್ಯೋಪಾಧ್ಯಾಯಿನಿ ರತ್ನಾ ಶೆಟ್ಟಿ ಹಾಗೂ ಅವರ ಉಪಾಧ್ಯಾಯಿನಿಯರ ತಂಡ; ಆ ಶಾಲೆಯನ್ನು ತೆರೆಯುವಲ್ಲಿ ಮಾದರಿಯಾಗಿ ಸಂದ ಚೆನ್ನೈನ ಕಿವುಡು ಮಕ್ಕಳ ಬಾಲವಿದ್ಯಾಲಯದ ಸ್ಥಾಪಕಶಕ್ತಿಗಳಾದ ಮೇನಕಾ ಪಾರ್ಥಸಾರಥಿ ಮತ್ತು ಸರಸ್ವತೀ ನಾರಾಯಣಸ್ವಾಮಿ; ಕಿವುಡು ಮಕ್ಕಳನ್ನು ಮಾರ್ಪಡಿಸುವ–ನೇರ್ಪಡಿಸುವ ಉದ್ಯಮದಲ್ಲಿ ವಿಶ್ವಮಾನ್ಯ ವ್ಯಕ್ತಿಗಳಾದ ಡೋರೀನ್ ವುಡ್‌ಫರ್ಡ್ ಹಾಗೂ ಸಿಸ್ಟರ್ ಜಾಯ್ಸ್ ಬಕ್ಲರ್ ಮತ್ತು ಮನುಕುಲತಿಲಕಳಾದ ಹೆಲನ್ ಕೆಲರ್ (ಬಾಲ್ಯದಲ್ಲೇ ಈಕೆ ಕಿವುಡು–ಕುರುಡು ಎರಡಕ್ಕೂ ತುತ್ತಾಗಿದ್ದಳು); ಹಾಗೂ, ತಮ್ಮನ್ನು ತಾವು ಈ ಕೆಲಸಕ್ಕೆ ಸಮರ್ಪಿಸಿಕೊಂಡ ಸ್ವತಃ ದೀಪಾ – ಇಂಥವರೆಲ್ಲರ ಉದಾಹರಣೆಗಳ ಮೂಲಕ ಈ ಪುಸ್ತಕದಲ್ಲಿ ನಾಟುವುದು ಸ್ತ್ರೀಪ್ರಯತ್ನವೇ ಹೊರತು, 'ಪೌರುಷೇಯ' ಅಥವಾ ಪುರುಷಪ್ರಯತ್ನವಲ್ಲ. ಅದರಿಂದಾಗಿಯೇ, **'ಶ್ರವಣದೋಷವುಳ್ಳ ಮಕ್ಕಳಿಗೆ ಮಾತು ಕಲಿಸುವ ಎಲ್ಲ ತಾಯಂದಿರಿಗೆ'** ಎಂಬ ಅಂಕಿತವು ಈ ಪುಸ್ತಕಕ್ಕೆ ಬಹುಸೂಕ್ತವಾಗಿದೆ. ಒಟ್ಟಿನಲ್ಲಿ, ಸಂಕಲ್ಪಬಲವೊಂದಿದ್ದಲ್ಲಿ, **'ಮೂಕಂ ಕರೋತಿ ವಾಚಾಲಂ'** ಎಂಬ 'ಪವಾಡ'ವನ್ನು ಮನುಷ್ಯ ಪ್ರಯತ್ನವೇ ಹೇಗೆ ಪ್ರತ್ಯಕ್ಷವಾಗಿಸಬಹುದು ಎಂಬುದನ್ನು 'ಮೂರನೇ ಕಿವಿ' ಅದ್ಭುತವಾಗಿ ನಿರೂಪಿಸುತ್ತದೆ.

ಪುಸ್ತಕದ ಪ್ರವೇಶಿಕ ಅನುಭಾಗಗಳಲ್ಲೊಂದಾದ 'ಒಳನೋಟ' ದಲ್ಲಿ, 'ವಿಧಿ ಮತ್ತು ವಿಜ್ಞಾನಕ್ಕೆ ಸವಾಲಾಗಿ ನಿಂತು ಸೆಣಸಿದ ತಾಯಿತಂದೆಯರು' ಎಂದು ರವೀಂದ್ರ ಭಟ್ಟ ದಂಪತಿಗಳನ್ನು ಕರೆಯಲಾಗಿದೆ. ಆದರೆ ವಿಜ್ಞಾನಕ್ಕೆ ಸವಾಲಾಗುವ ಬದಲು, ವಿಜ್ಞಾನವನ್ನೇ 'ಅಕ್ಷರಶಃ' ಪಾಲಿಸಿ ಅವರು ಯಶಸ್ಸನ್ನು ಕಂಡುಕೊಂಡರೆಂಬುದು ಪುಸ್ತಕದಿಂದ ಸುವಿದಿತವಾಗುತ್ತದೆ. ಸಾಕ್ಷರತೆಯನ್ನು ಬೆಳೆಸುವುದೇ ಒಂದು ಭಾರಿ ಸಾಹಸವಾಗಿರುವಲ್ಲಿ, ಒಂದೊಂದೂ ಅಕ್ಷರದ ಅರ್ಥವನ್ನಷ್ಟೇ ಅಲ್ಲದೆ, ಅದರ ಹಿಂದಿನ ಗಾಢಭಾವನೆಗಳನ್ನೂ, ಸಮಗ್ರ ಅನುಭವವನ್ನೂ ಮಗನಿಗೆ ಮೈಗೂಡಿಸುವ ನಿಟ್ಟಿನಲ್ಲಿ, ಒಂದೊಂದು 'ಜ್ಞಾನಕೋಶ'ವನ್ನೇ ಅವನಿಗೆ ಪರಿಚಯಿಸಿ, ಕಂಪ್ಯೂಟರ್ ಪ್ರೋಗ್ರ್ಯಾಮಿಂಗ್‌ನಂತೆ ಅವನಿಗೆ ಅಗುಳು–ಅಗುಳಾಗಿ 'ಅಕ್ಷರಪ್ರಾಶನ' ಮಾಡಿಸಿದ ಈ ದಂಪತಿಗಳು ಯಾವ ಶಬ್ದಶಾಸ್ತ್ರಜ್ಞರಿಗೂ ಅಥವಾ ವ್ಯಾಕರಣ ಶಿಕ್ಷಕರಿಗೂ ಕಮ್ಮಿಯಿಲ್ಲದಂತೆ ಇಲ್ಲಿ ಕಂಡುಬರುತ್ತಾರೆ.

*(ಪುಟ 35 ರಲ್ಲಿ ಮುಂದುವರೆದಿದೆ)*



# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ಭಿಕ್ಷುಕರ ಕಾಣಿಕೆ ನನಗೆ ಬೇಡ

**ದೇ**ವರನ್ನು ಕುರಿತ ಪ್ರೇಮವೆಂಬುದು ಅತ್ಯಂತ ಅಮೂಲ್ಯವಾದ ವಸ್ತು. ಅದು ದೇವರಿಂದ ಏನನ್ನೂ ಬೇಡುವುದಿಲ್ಲ. ಹಾಗೆ ಬೇಡದಿರುವುದೇ ಪ್ರೇಮದ ಪ್ರಧಾನ ಲಕ್ಷಣ. ಪ್ರೇಮಕ್ಕೆ ಪ್ರತಿಯಾಗಿ ಯಾರಾದರೂ ಏನನ್ನಾದರೂ ಬೇಡಿದರೆ ಅವರು ಭಿಕ್ಷುಕರೆನಿಸುತ್ತಾರೆ. ಭಿಕ್ಷುಕರ ಪ್ರೀತಿಯು ಪ್ರೀತಿಯೇ ಅಲ್ಲ. ಪ್ರೀತಿಯು ತನ್ನಲ್ಲಿರುವುದನ್ನೆಲ್ಲ ಕೊಟ್ಟುಬಿಡುತ್ತದೆ. ಪ್ರೀತಿಯ ಮೂಲಕ ದೇವರನ್ನು ಪೂಜಿಸುವುದೇ ನಿಜವಾದ ಆಧ್ಯಾತ್ಮಿಕ ಪೂಜೆ ಎನಿಸಿಕೊಳ್ಳುತ್ತದೆ. ದೇವರು ಪ್ರೇಮಮೂರ್ತಿಯೂ ದಯಾಮಯನೂ ಸರ್ವಶಕ್ತನೂ ಸರ್ವೇಶ್ವರನೂ ಅನಂತನೂ ಆಗಿದ್ದಾನೆ. ಅವನಾಗಿಯೇ ಏನನ್ನಾದರೂ ಕೊಟ್ಟರೆ ಕೊಡಲಿ, ಬೇಡುವ ಪ್ರಶ್ನೆ ಮಾತ್ರ ಇರಬಾರದು. ಅವನು ಒಳ್ಳೆಯದನ್ನು ಕೊಟ್ಟರೂ ಸರಿ, ಕೆಟ್ಟದನ್ನು ಕೊಟ್ಟರೂ ಸರಿ – ಮೌನವಾಗಿ ಸ್ವೀಕರಿಸಬೇಕು.

ಹಿಂದೆ ಕಳಿಂಗರಾಜ್ಯವನ್ನು ಪ್ರತಾಪಸಿಂಹನೆಂಬ ಚಕ್ರವರ್ತಿಯು ಆಳುತ್ತಿದ್ದನು. ಒಂದು ದಿನ ಅವನು ಬೇಟೆಯ ವಿನೋದಕ್ಕೆಂದು ಹೋಗಿದ್ದಾಗ, ಅರಣ್ಯದಲ್ಲಿ ದಾರಿತಪ್ಪಿ ತನ್ನ ಪರಿವಾರದಿಂದ ದೂರವಾಗಿಬಿಟ್ಟನು. ಬಿಸಿಲಬೇಗೆಯಿಂದ ಬಸವಳಿದ ಅಶ್ವಾರೋಹಿ ದೊರೆಯು ನೀರಿಗಾಗಿ ಹಂಬಲಿಸುತ್ತ, ಅರಣ್ಯದಲ್ಲೆಲ್ಲ ಅಡ್ಡಾಡಿದನು. ಆಗ ಅಲ್ಲೊಂದು ಮುನಿಗಳ ಆಶ್ರಮ ಅವನ ಕಣ್ಣಿಗೆ ಬಿತ್ತು. ಅಲ್ಲಿ ಹೊಕ್ಕಾಗ ಮುನಿಗಳು ಮಹಾರಾಜನನ್ನು ಸ್ವಾಗತಿಸಿ, ಕುಳ್ಳಿರಿಸಿ, ಅವನ ಬಾಯಾರಿಕೆಯನ್ನು ನೀಗಿಸಿದರು; ಮೃದುವಚನಗಳನ್ನಾಡುತ್ತ ಅವನನ್ನು ಹಣ್ಣುಹಂಪಲುಗಳಿಂದ ಸತ್ಕರಿಸಿದರು. ಬಾಯಾರಿದ್ದ ಕುದುರೆಗೂ ನೀರುತೋರಿಸಿದರು. ಆ ಮಹಾತ್ಮರ ವ್ಯಕ್ತಿತ್ವದಿಂದ ದೊರೆಯು ತುಂಬಾ ಪ್ರಭಾವಿತನಾದನು. "ತಾವು ನನ್ನ ರಾಜಧಾನಿಗೆ ಪಾದಬೆಳೆಸಬೇಕು. ನನ್ನಿಂದ ಏನಾದರೂ ಕಾಣಿಕೆ ಸ್ವೀಕರಿಸಬೇಕು" ಎಂದು ದೊರೆಯು ಆ ಮಹಾತ್ಮರನ್ನು ಬೇಡಿಕೊಂಡನು. ಅದಕ್ಕೆ ಮಹಾತ್ಮರು, "ಈ ಅರಣ್ಯದಲ್ಲಿ ಪರಮಾತ್ಮನ ಕೃಪೆಯಿಂದ ದೊರೆಯುತ್ತಿರುವ ಕಂದಮೂಲಫಲಾದಿಗಳಿಂದಲೇ ನಾವು ತೃಪ್ತರಾಗಿದ್ದೇವೆ. ನಮಗಾವ ಬಳುವಳಿಯೂ ಬೇಡ, ದೊರೆಯೇ" ಎಂದುಬಿಟ್ಟರು. "ನಿಮಗಾಗಿ ಎಂದಲ್ಲ, ನನಗಾಗಿಯಾದರೂ ತಾವು ದಯಮಾಡಿಸಬೇಕು, ತಮ್ಮ ಪಾದಧೂಳಿಯಿಂದ ನನ್ನ ಅರಮನೆಯು ಪವಿತ್ರವಾಗಬೇಕು" ಎಂದು ಮೇಲಿಂದಮೇಲೆ ಪ್ರಾರ್ಥಿಸಿದನು. ಅದಕ್ಕೆ ಮಹಾತ್ಮರು, "ನಿನ್ನ ಸದ್ಗುಣಗಳು ಚಿರಾಯುವಾಗಲಿ, ನಿನ್ನ ರಾಜಧಾನಿಯತ್ತ ಮನಸ್ಸು ಸೆಳೆದ ದಿನ ನಾವಲ್ಲಿ ಪ್ರತ್ಯಕ್ಷರಾಗುತ್ತೇವೆ" ಎಂದು ಆಶ್ವಾಸನೆಕೊಟ್ಟು ದೊರೆಯನ್ನು ಬೀಳ್ಕೊಟ್ಟರು. ಅಷ್ಟುಹೊತ್ತಿಗೆ ದೊರೆಯನ್ನು ಹುಡುಕುತ್ತ ಬಂದ ಪರಿವಾರದವರು ಸಂತೋಷದಿಂದ ಅವನನ್ನು ಜೊತೆಮಾಡಿಕೊಂಡು ಅರಮನೆಯನ್ನು ಸೇರಿದರು.

ಹೀಗೆ ಅದೆಷ್ಟೋ ದಿನಗಳು ಉರುಳಿಹೋದವು. ಒಂದು ದಿನ ಇದ್ದಕ್ಕಿದ್ದಂತೆ ಆ ಮಹಾತ್ಮರಿಗೆ, " ಈ ದಿನ ಪ್ರತಾಪಸಿಂಹನನ್ನು ಕಾಣಬೇಕು" ಎಂದೆನಿಸಿ, ಅರಮನೆಗೆ ಪಾದಬೆಳೆಸಿಯೇಬಿಟ್ಟರು. ಆ ಹೊತ್ತಿನಲ್ಲಿ ಮಹಾರಾಜನು ಪೂಜಾಗೃಹದಲ್ಲಿದ್ದನು. ಮಂತ್ರಿಗಳು, ಪರಿವಾರದವರು ಮಹಾತ್ಮರನ್ನು ಸ್ವಾಗತಿಸಿ, ವಿಷಯವನ್ನು ತಿಳಿಸಿ, ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ಉನ್ನತಾಸನದ ಮೇಲೆ ಕೂರಿಸಿದರು. ಅತ್ತ ಪೂಜಾಂತ್ಯದಲ್ಲಿ ದೊರೆಯು ದೇವರನ್ನು ಕುರಿತು, "ಹೇ ಕರುಣಾಕರ, ಹೇ ಭಕ್ತವತ್ಸಲ, ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ನನ್ನನ್ನು ನೂರುಕಾಲ ಕಾಪಾಡು; ಧನಕನಕವಸ್ತುವಾಹನಗಳನ್ನು ವಿಪುಲವಾಗಿ ಕರುಣಿಸು; ಆನೆಕುದುರೆಕಾಲಾಳುಗಳೆಂಬ ನನ್ನ ಚತುರಂಗದಳವು ಇಮ್ಮಡಿಸುವಂತೆ ಮಾಡು. ನನ್ನ ರಾಜ್ಯವು ವಿಸ್ತಾರವಾಗುವಂತೆ ಮಾಡು; ನನ್ನ ಪ್ರಜೆಗಳೂ ಪರಿವಾರದವರೂ ನನಗೆ ವಿಧೇಯರಾಗಿರುವಂತೆ ಕರುಣಿಸು; ನನ್ನ ಕೀರ್ತಿಯು ದಿಗಂತವಿಶ್ರಾಂತವಾಗುವಂತೆ ಮಾಡು" ಎಂದು ಪರಿಪರಿಯಾಗಿ ಪ್ರಾರ್ಥಿಸುತ್ತಿದ್ದನು. ಅರಣ್ಯದಿಂದ ಬಂದಿದ್ದ ಆ ಮಹಾತ್ಮರಾದರೋ ತಮ್ಮ ತಪೋಬಲದಿಂದ ಇತರರ ಮನಸಿನಲ್ಲುಂಟಾಗುವ ಚಿಂತನೆ, ಭಾವನೆಗಳನ್ನು ಯಥಾವತ್ತಾಗಿ ಕೇಳಿಸಿಕೊಳ್ಳಬಲ್ಲವರಾಗಿದ್ದರು. ದೊರೆಯು ದೇವರಲ್ಲಿ ಮೊರೆಯಿಟ್ಟುದೆಲ್ಲವೂ ಅವರಿಗೆ ಸ್ಪಷ್ಟವಾಗಿ ಕೇಳಿಸಿತು.

ಪೂಜಾಗೃಹದಿಂದ ಹೊರಬಂದ ಪ್ರತಾಪಸಿಂಹದೊರೆಯು ಮಹಾತ್ಮರ ದರ್ಶನದಿಂದ ಆನಂದಭರಿತನಾದನು. ಅತ್ಯಂತ ಸಡಗರದಿಂದ ಅವರನ್ನು ಸತ್ಕರಿಸಿದನು. ಅವರನ್ನು ಬೀಳ್ಕೊಡುವ ಹೊತ್ತುಬಂದಾಗ ಬೇಕಾದಹಾಗೆ ಅವರಿಗೆ ಫಲಪುಷ್ಪಗಳನ್ನೂ ಕಾಣಿಕೆಗಳನ್ನೂ ಸಮರ್ಪಿಸಿದನು. ಆಗ ಮಹಾತ್ಮರು, "ಮಹಾರಾಜಾ, ಈ ಕಾಣಿಕೆಗಳಾವುವೂ ನನಗೆ ಬೇಡ. ನಾನು ಭಿಕ್ಷುಕರಿಂದ ಏನನ್ನೂ ಸ್ವೀಕರಿಸುವುದಿಲ್ಲ" ಎಂದು ಮೃದುವಾಗಿಯೇ ನುಡಿದರು. ತನ್ನನ್ನು 'ಭಿಕ್ಷುಕ' ಎಂದು ಹೇಳಿದ್ದರಿಂದ ಪ್ರತಾಪಸಿಂಹನಿಗೆ ಸಿಡಿಲುಬಡಿದಂತಾಯಿತು. ಆದರೂ ಆ ಮಹಾತ್ಮರ ಮೇಲೆ